ಒ ಎಸ್ ಃ 66/2019
ಪಿಡಬ್ಲ್ಯು -1

ಸಾಕ್ಷಿಗೆ ದಿನಾಂಕ 09-01-2020 ರಂದು ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಡಿ ಎಸ್ ಬಿ ವಕೀಲರಿಂದ

ನಾನು ಈ ದಾವೆಯಲ್ಲಿ ವಾದಿ ಪರ ಅಧಿಕಾರ ಪತ್ರ ಪಡೆದವನಾಗಿದ್ದು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಾಕ್ಷ್ಯವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

ನನಗೆ ನನ್ನ ಹೆಂಡತಿ ವಾದಿಯವರು ಬರೆದುಕೊಟ್ಟ ಜಿಪಿಎವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು, ದಿನಾಂಕ 13.03.1972 ರಲ್ಲಿ ಆದ ಒಂದು ವಿಭಾಗ ಪತ್ರದ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು, ದಿನಾಂಕ 02.04.2013 ರ ದಾನ ಪತ್ರದ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು, ಸ.ನಂ. 75/1 ಬಿ, 74/3 ಎ 2 ಎರಡು ಆರ್ ಟಿ ಸಿಗಳನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಮತ್ತು ನಿಪಿ-5 ಎಂದು, ಬೆಳ್ಳಾರೆ ಪೊಲೀಸರು ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು, ದೂರು ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು, ದೂರನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಆದುದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತೆ.ನ್ಯಾಸಾ.ಹೇ. ನನ್ನ ಉ.ಬೆ. ಮಾಡಲಾಯಿತು.

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ

ಸಿವಿಲ್ ನ್ಯಾಯಾಧೀಶರು, ಸುಳ್ಯ.